ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್ – 2021)

Azadi Ka Amrit Mahotsav

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade - 2021)

E-mail: academic@rcub.ac.in
rcubug2018@gmail.com

ಕುಲಸಚಿವರ ಕಾರ್ಯಾಲಯ
Office of the Registrar

Website: www.rcub.ac.in
Phone No.: 0831-2565214/34

ಪ.ಸಂ.: ರಾಚವಿ/ಬೆಳಗಾವಿ/ಸ್ನಾತಕ ವಿಭಾಗ/2022–23/1223 ದಿನಾಂಕ: 22 JUN 2022

## ಸುತ್ತೋಲೆ

ವಿಷಯ: 2022–23ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ UUCMS ಮುಖಾಂತರ ಆನ್‌ಲೈನ್ ಪ್ರವೇಶಾತಿಯನ್ನು ಪಡೆದುಕೊಂಡು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಾಗ ಈ ಕೆಳಕಾಣಿಸಿದ ಮಾರ್ಗಸೂಚಿಗಳನ್ನು ಪಾಲಿಸುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಸರ್ಕಾರ, ಉನ್ನತ ಶಿಕ್ಷಣ ಇಲಾಖೆ ಇವರ ಪ.ಸಂ: ಇಡಿ34ಇಜಿಒವಿ2020, ದಿನಾಂಕ: 13.06.2022
2. ಕರ್ನಾಟಕ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆಯವರ ಪತ್ರ ಸಂ: ಕಾಶಿಇ/ಶೈವಿ/36/ ಪ್ರವೇಶಾತಿ ಮಾರ್ಗಸೂಚಿ/2022–23, ದಿ: 18.06.2022
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 22.06.2022

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳನ್ವಯ, 2022–23ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಕೋರ್ಸುಗಳ ಪ್ರಥಮ ವರ್ಷದ ಪ್ರವೇಶಾತಿಗೆ ಸಂಬಂಧಿಸಿದಂತೆ UUCMS ಮುಖಾಂತರ ಆನ್‌ಲೈನ್‌ನಲ್ಲಿಯೇ ಕಡ್ಡಾಯವಾಗಿ ಪ್ರವೇಶಾತಿಯನ್ನು ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ತಿಳಿಸಿರುವುದರಿಂದ, ದಿನಾಂಕ: 23.06.2022 ರಿಂದ ಪ್ರವೇಶಾತಿಯನ್ನು ಪ್ರಾರಂಭಿಸಲು ಹಾಗೂ ಪ್ರಥಮ ವರ್ಷದ ಕಾರ್ಯಕ್ರಮಗಳಿಗೆ ಪ್ರವೇಶಾತಿ ಬಯಸಿ ಬರುವ ಅರ್ಹ ವಿದ್ಯಾರ್ಥಿಗಳಿಗೆ UUCMS ತಂತ್ರಾಂಶದಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವಾಗ ಈ ಕೆಳಗಿನ ಅಂಶಗಳ ಬಗ್ಗೆ ಕ್ರಮಕೈಗೊಳ್ಳುವಂತೆ ಎಲ್ಲ ಸ್ನಾತಕ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಸಲಾಗಿದೆ.

1. ಮಹಾವಿದ್ಯಾಲಯಗಳಲ್ಲಿ UUCMS Help Desk ಸ್ಥಾಪಿಸಿ, ಪ್ರವೇಶಾತಿಗೆ ಬರುವ ವಿದ್ಯಾರ್ಥಿಗಳಿಗೆ NEP ಅನುಸಾರ ಕಳೆದ ಶೈಕ್ಷಣಿಕ ಸಾಲನಲ್ಲಿ ಜಾರಿಯಲ್ಲಿದ್ದ Model Structure ನಂತೆ ವಿಷಯಗಳ ಬಗ್ಗೆ ವಿವರಣೆ ನೀಡಿ, ಅರ್ಜಿ ಸಲ್ಲಿಸಲು ಸಹಕರಿಸಬೇಕು.
2. UUCMS UG Admission Portal ಕಾರ್ಯನಿರ್ವಹಿಸುತ್ತಿದ್ದು, UUCMS ತಂತ್ರಾಂಶದಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸುವುದು.
3. ಆಯಾ ಮಹಾವಿದ್ಯಾಲಯಗಳಲ್ಲಿ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ First-Cum-First Serve ಅಥವಾ Merit-Roster ಪ್ರಕಾರ ಪ್ರವೇಶಾತಿ ನೀಡುತ್ತಿದ್ದಲ್ಲಿ, ಆ ಸೌಲಭ್ಯಕ್ಕೆ UUCMS ನಲ್ಲಿ ಅವಕಾಶ ಕಲ್ಪಿಸಿರುವುದರಿಂದ ನಿಗದಿತ ಸಮಯದೊಳಗೆ ಪ್ರವೇಶಾತಿ ನೀಡುವುದು.
4. ತಮ್ಮ ಮಹಾವಿದ್ಯಾಲಯಗಳ ವೆಬ್‌ಸೈಟ್‌ನಲ್ಲಿ UUCMS Portal ಗೆ (https://uucms.karnataka.gov.in/) ಲಿಂಕ್ ನೀಡಿ, ವಿದ್ಯಾರ್ಥಿಗಳು/ ಪೋಷಕರುಗಳು ಮಾಹಿತಿಯನ್ನು ಪಡೆದುಕೊಳ್ಳಲು ವ್ಯವಸ್ಥೆ ಮಾಡುವುದು.
5. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವೆಬ್‌ಸೈಟ್ rcub.ac.in ನಲ್ಲಿ ಸದರಿ ವಿಷಯದ ಬಗ್ಗೆ Videos ಮತ್ತು Manuals ಗಳು ಲಭ್ಯವಿರುತ್ತವೆ.
6. UUCMS ತಂತ್ರಾಂಶದ ಮೂಲಕ ಸಲ್ಲಿಸುವ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳ ಹೆಸರನ್ನು ಆಧಾರ್ ಕಾರ್ಡ್‌ನಲ್ಲಿರುವಂತೆ ನಮೂದಿಸುವುದು.

P.T.O

7. UUCMS ಸಂಬಂಧಿತ ಅಕಾಡೆಮಿಕ್ ಮಾಡ್ಯೂಲ್ ವಿಷಯಗಳಿಗೆ 0831-2565219 ಹಾಗೂ ಅಡ್ಮಿಷನ್ ಮಾಡ್ಯೂಲ್ ವಿಷಯಗಳಿಗೆ 0831-2565214 ಅಥವಾ ನೋಡಲ್ ಅಧಿಕಾರಿಯವರನ್ನು ಸಂಪರ್ಕಿಸಬಹುದು.
8. ಬ್ಯಾಂಕ್ ಮಾಹಿತಿಯನ್ನು NSDL ನಮೂನೆಯಲ್ಲಿ ಭರ್ತಿಮಾಡಿ Bank Manager ರವರ ರುಜು ಹಾಗೂ ಮೊಹರಿನೊಂದಿಗೆ NSDL ನಮೂನೆಯನ್ನು ಹಾಗೂ Cancelled Cheque ನ Scanned Copy ಯನ್ನು UUCMS Portal ಗೆ ಅಪ್‌ಲೋಡ್ ಮಾಡುವುದು.
9. ವಿದ್ಯಾರ್ಥಿ ಪ್ರವೇಶಾತಿಗೆ ಸಂಬಂಧಿಸಿದಂತೆ ಇತರ ವಿಷಯಗಳನ್ನು ಸರ್ಕಾರದಿಂದ ನಿರ್ದೇಶನ ಬಂದ ನಂತರ ತಿಳಿಸಲಾಗುವುದು.
10. ವಿಶ್ವವಿದ್ಯಾಲಯದಿಂದ ಸಂಯೋಜನೆ ಹೊಂದದ ಕಾರ್ಯಕ್ರಮ/ ವಿಷಯಗಳಿಗೆ ವಿದ್ಯಾರ್ಥಿ ಪ್ರವೇಶಾತಿ ಮಾಡಬಾರದು. ಪಠ್ಯಕ್ರಮ ಹಾಗೂ ನಿಯಮಾವಳಿ ಅನುಮೋದನೆಯಾಗದ ಕಾರ್ಯಕ್ರಮ/ ವಿಷಯಗಳಿಗೂ ವಿದ್ಯಾರ್ಥಿ ಪ್ರವೇಶಾತಿ ಮಾಡಬಾರದು. ಅಲ್ಲದೇ ವಿಶ್ವವಿದ್ಯಾಲಯದಿಂದ ಕೋರ್ಸ್/ ವಿಷಯಗಳಿಗೆ ನೀಡಲಾದ ಪ್ರವೇಶಾತಿ ಮಿತಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳಬಾರದು.
11. ಪ್ರತಿ ವಿಷಯಕ್ಕೆ ಕನಿಷ್ಠ 15 ವಿದ್ಯಾರ್ಥಿಗಳ ಪ್ರವೇಶವಿರಬೇಕು. (ಐಚ್ಛಿಕ ಕನ್ನಡ ವಿಷಯ ಹೊರತುಪಡಿಸಿ)
12. ಮಾನ್ಯತೆ ಪಡೆಯದ Board/ ಇಲಾಖೆಗಳಿಂದ ಕಾರ್ಯಕ್ರಮಗಳನ್ನು ಕಲಿತ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಬಾರದು ಹಾಗೂ ಈ ಬಗ್ಗೆ ಸಮಸ್ಯೆಯಾದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ.
13. ಪ್ರವೇಶಾತಿಗೆ ನೀಡಲಾದ ಕೊನೆಯ ದಿನಾಂಕದ ನಂತರ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಬಾರದು.
14. ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕಗಳಿಗೆ ಸಂಬಂಧಿಸಿದಂತೆ ಶುಲ್ಕಗಳನ್ನು ಕಾರ್ಯಕ್ರಮವಾರು ಪಾವತಿ ಮಾಡಬೇಕು. ಒಂದು ಚಲನ್‌ನಲ್ಲಿ ಅಥವಾ ಡಿ.ಡಿ.ಯಲ್ಲಿ ಒಂದೇ ಕಾರ್ಯಕ್ರಮಕ್ಕೆ ಸಂಬಂಧಿಸಿದ ನೊಂದಣಿ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪಾವತಿಸಬೇಕು. ಬಿ.ಎ./ ಬಿ.ಎಸ್ಸಿ./ ಬಿ.ಕಾಂ./ ಕೋಸ್‌ಗಳ ಶುಲ್ಕವನ್ನು ಒಂದು ಚಲನ್‌ನಲ್ಲಿಯೂ, ಬಿಬಿಎ, ಬಿಸಿಎ ಹಾಗೂ ಬಿ.ಎಸ್.ಡಬ್ಲ್ಯೂ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಶುಲ್ಕವನ್ನು ಕೋರ್ಸ್‌ವಾರು Online/ offline ಮೂಲಕ ಪಾವತಿಸುವುದು.
15. ಸ್ನಾತಕ ಕೋರ್ಸ್‌ಗಳಿಗೆ ಬೇರೆ ಬೋರ್ಡ್‌ಗಳಿಂದ ಪಾಸಾದ ವಿದ್ಯಾರ್ಥಿಗಳು ಕಡ್ಡಾಯವಾಗಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಂಡು ಪ್ರವೇಶಾತಿಯನ್ನು ಪಡೆದುಕೊಳ್ಳತಕ್ಕದ್ದು. ಅರ್ಹತಾ ಪ್ರಮಾಣ ಪತ್ರವನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಮಹಾಂತೇಶನಗರದಲ್ಲಿ ವಿತರಿಸಲಾಗುವುದು.
16. 2022-23ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು ಸ್ನಾತಕ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಪಡೆಯತಕ್ಕದ್ದು. ಆಫ್‌ಲೈನ್ ಮೂಲಕ ಯಾವುದೇ ಪ್ರವೇಶಾತಿ ಅರ್ಜಿಯನ್ನು ಸ್ವೀಕರಿಸುವಂತಿಲ್ಲ.

ಮೇಲಿನ ಕ್ರಸಂ. 01 ರಿಂದ 14ರ ವರೆಗಿನ ಅಂಶಗಳನ್ನು ಪರಿಗಣಿಸಿ, ಈ ಪ್ರಕಾರವೇ ವಿದ್ಯಾರ್ಥಿ ಪ್ರವೇಶಾತಿ ಯಾದಿಯನ್ನು ತಯಾರಿಸಿ, ಯಾವುದೇ ಲೋಪ ದೋಷಗಳಿಲ್ಲದಂತೆ ಯಾದಿಯನ್ನು ಪರಿಶೀಲಿಸಿ UUCMS ತಂತ್ರಾಂಶದ ಮೂಲಕ ವಿಶ್ವವಿದ್ಯಾಲಯದ ಅನುಮೋದನೆಗೆ ಸಲ್ಲಿಸಲು ಸೂಚಿಸಲಾಗಿದೆ.

ಕುಲಸಚಿವರು

ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾ ಸಂಗಮ
ಬೆಳಗಾವಿ-೫೯೧೧೫೬, ಕರ್ನಾಟಕ

ಇವರಿಗೆ,

1. ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ
2. ಪ್ರಾಚಾರ್ಯರು, ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿನ ಸಂಯೋಜಿತ/ ಸ್ವಾಯತ್ತ ಸ್ನಾತಕ ಮಹಾವಿದ್ಯಾಲಯಗಳು.
3. ರಕ್ಷಾ ಪ್ರತಿ.